# ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ : 12.07.2024 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1. ಪ್ರೊ.ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು — ಅಧ್ಯಕ್ಷರು
2. ಶ್ರೀ.ಶಿವಬಸಪ್ಪ ಮಾಲಿಪಾಟೀಲ್ — ಸಿಂಡಿಕೇಟ್ ಸದಸ್ಯರು
3. ಶ್ರೀ.ನಾಗೇಂದ್ರ ಪ್ರಸಾದ್ ಎ.ಎಂ — ಸಿಂಡಿಕೇಟ್ ಸದಸ್ಯರು
4. ಪ್ರೊ.ಪಾರ್ವತಿ ಸಿ.ಎಸ್. — ಸಿಂಡಿಕೇಟ್ ಸದಸ್ಯರು
5. ಶ್ರೀ.ಪಾಂಡು, ಪ್ರಾಂಶುಪಾಲರು, — ಸಿಂಡಿಕೇಟ್ ಸದಸ್ಯರು
6. ಡಾ.ಇಕ್ಬಾಲ್ ಶೇಖ್, ಪ್ರಾಂಶುಪಾಲರು, — ಸಿಂಡಿಕೇಟ್ ಸದಸ್ಯರು
7. ಪ್ರೊ.ಎಂ.ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) (ಆನ್ ಲೈನ್ ಮುಖಾಂತರ) — ಸದಸ್ಯರು
8. ಪ್ರೊ.ವಿಶ್ವನಾಥ ಎಂ., ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|
| 01 | ದಿನಾಂಕ 21.02.2024 ರಂದು ನಡೆಸ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 15.06.2024 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಡೀಕರಿಸುವ ಕುರಿತು. | ದಿನಾಂಕ 21.02.2024 ರಂದು ನಡೆಸ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 15.06.2024 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ದೃಡೀಕರಿಸಲಾಯಿತು. |
| 02 | 2024-25 ನೇ ಸಾಲಿಗೆ ಸ್ಥಳಿಯ ತನಿಖಾ ಸಮಿತಿಯ (LIC) ವರದಿಯ ಪ್ರಕಾರ ಕಾಲೇಜುಗಳಿಗೆ ಸಂಯೋಜನಾ ಮುಂದುವರಿಕೆ ಮತ್ತು ಪ್ರವೇಶ ಮಿತಿ ಹೆಚ್ಚಳ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ್ ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ 190 ಕಾಲೇಜುಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ್ದವು. 2024-25ನೇ ಸಾಲಿಗೆ 2 ಹೊಸ ಕಾಲೇಜುಗಳಿಗೆ ಹಾಗೂ 188 ಕಾಲೇಜುಗಳು ಸಂಯೋಜನೆಯ ವಿವಿಧ ಕಾರ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದವು. ಅವುಗಳಲ್ಲಿ ಹೊಸ ಕಾಲೇಜು/ಹೊಸ ಪಿಜಿ ಕೋರ್ಸ್/ ಹೊಸ ವಿಷಯ/ಪಿಜಿ BCA/BBA ಕೋರ್ಸ್‌ಗಳಿಗೆ ಪ್ರವೇಶ ಮಿತಿ ಹೆಚ್ಚಳ/ ಪ್ರಥಮ ಬಾರಿ ಶಾಶ್ವತ ಸಂಯೋಜನೆಗೆ 26 ಕಾಲೇಜುಗಳು ಅರ್ಜಿ ಸಲ್ಲಿಸಿದ್ದವು. 2024-25ನೇ ಸಾಲಿಗೆ ಸಲ್ಲಿಸಿದ್ದ ಸಂಯೋಜನಾ ಅರ್ಜಿಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಬಹುದುದಾದ 26 ಕಾಲೇಜುಗಳ ಅರ್ಜಿಗಳನ್ನು ಪ್ರಥಮ ಹಂತದಲ್ಲಿ ಅಂದರೆ 11.06.2024 ರಿಂದ 12.06.2024 ರವರೆಗೆ LIC ತನಿಖೆ ಕೈಗೊಂಡು ದಿನಾಂಕ: 15.06.2024 ರಂದು ಆನ್‌ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ವರದಿ ಮಂಡನೆ ಮಾಡಿದ ನಂತರ ನಿಯಮಾವಳಿಗಳ ಪ್ರಕಾರ 17 ಕಾಲೇಜುಗಳ |

ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆ ನಿರ್ಧರಿಸಿತು. ಇನ್ನುಳಿದ 164 ಕಾಲೇಜುಗಳಿಗೆ 2024-25ನೇ ಸಾಲಿಗೆ ಸಂಯೋಜನಾ ಮುಂದುವರಿಕೆ ಮತ್ತು ವಿಶ್ವವಿದ್ಯಾಲಯದ ಹಂತದಲ್ಲೇ ನಿರ್ಧರಿಸಬಹುದಾದ BA/B.Com ಕೋರ್ಸ್‌ಗಳಿಗೆ B.Com ಒಂದು ಡಿವಿಜನ್ ಹೆಚ್ಚುವರಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಕಾರಣ ಎರಡನೇ ಹಂತದಲ್ಲಿ ಸದರಿ ಕಾಲೇಜುಗಳಿಗೆ ದಿನಾಂಕ:21.06.2024 ರಿಂದ 28.06.2024ರ ಅವಧಿಯಲ್ಲಿ LIC ತಂಡಗಳು ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ UUCMS ಮುಖಾಂತರ ವರದಿ ಸಲ್ಲಿಸಲಾಗಿತ್ತು. ನಂತರ UUCMS ಮುಖಾಂತರ Score Card generation ಮಾಡಲಾಯಿತು ಮತ್ತು LIC ತಂಡಗಳು ಸಲ್ಲಿಕೆ ಮಾಡಿದ ಶಿಫಾರಸ್ಸುಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಕಾಲೇಜುಗಳು ಪಡೆದುಕೊಂಡಿರುವ Affiliation Score ನ್ನು ಆಧರಿಸಿ ಈ ಕೆಳಗಿನ ಮಾಹಿತಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಹಾಗೂ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಫತ್ತೇಪೂರ ಇವರು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು.

| Affiliation Score "X" in % | No. of Colleges | Cumulative Total |
|---|---|---|
| X< 30 | 8 | 8 |
| 30<X<35 | 4 | 12 |
| 35<X<40 | 17 | 29 |
| 40<X<45 | 13 | 42 |
| 45<X<50 | 29 | 71 |
| 50<X<60 | 45 | 116 |
| 60<X<70 | 35 | 151 |
| X<70 | 13 | 164 |
| **Total** | **164** | |

ಕರ್ನಾಟಕ ಸರ್ಕಾರದ ನಿಯಮಾವಳಿಯ ಪ್ರಕಾರ ಸಂಯೋಜನಾ ಮುಂದುವರಿಕೆಗೆ ಕನಿಷ್ಠ 45 ಅಂಕಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ರಾಯಚೂರು ವಿಶ್ವವಿದ್ಯಾಲಯ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಕಾಲೇಜುಗಳು ತಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳುವ ಕ್ರಮವಾಗಿ ವಿಶ್ವವಿದ್ಯಾಲಯದ ಸಿಂಡಿಕೇಟ್ 2022-23ನೇ ಸಾಲಿಗೆ ಕನಿಷ್ಠ 30 ಅಂಕಗಳನ್ನು ಮತ್ತು 2023-24ನೇ ಸಾಲಿಗೆ ಕನಿಷ್ಠ 40 ಅಂಕಗಳನ್ನು ಪಡೆದುಕೊಂಡ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಕೆಗೆ ನಿರ್ಣಯ ಕೈಗೊಂಡಿತ್ತು. 2024-25ನೇ ಸಾಲಿಗೆ ಈ ಮೇಲೆ ತಿಳಿಸಿದ ಮಾಹಿತಿಯ ಆಧಾರದ ಮೇಲೆ ವಿಸ್ತೃತ ಚರ್ಚೆಯ ನಂತರ ಈ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಸರ್ವಾನುಮತದಿಂದ ಸಮ್ಮತಿಸಿ 45 ಅಂಕಗಳಿಗಿಂತ ಕಡಿಮೆ ಪಡೆದಿರುವ ಕಾಲೇಜುಗಳಿಗೆ ಅವರ ಸಂಯೋಜನೆಯನ್ನು ಹಿಂಪಡೆಯಬಾರದೇಕೆ ಎಂಬ Showcause ನೋಟಿಸ್ ನೀಡುವ ಬಗ್ಗೆ ತೀರ್ಮಾನಿಸಿ, 45

<table>
<tr><td></td><td></td><td>ಅಂಕಗಳಿಗಿಂತ ಕಡಿಮೆ ಪಡೆದ ಕಾಲೇಜುಗಳನ್ನು ಹೊರತುಪಡಿಸಿ, 45 ಅಂಕಗಳಿಗಿಂತ ಹೆಚ್ಚು ಅಂಕ ಪಡೆದ ಕಾಲೇಜುಗಳ ಸಂಯೋಜನೆಯನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿ, ಒಪ್ಪಿಗೆ ಸೂಚಿಸಿ, ಅನುಮೋದಿಸಿತು.</td></tr>
<tr><td>03</td><td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಯೋಜನೆಯ ಕಾರ್ಯಗಳ ಪ್ರಗತಿ ಕುರಿತು ಚರ್ಚೆ.</td><td>ಕುಲಸಚಿವರು ಸಭೆಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಕಾಮಗಾರಿಯ ಬಗ್ಗೆ ಈ ಕೆಳಗಿನಂತೆ ವಿವರಣೆ ನೀಡಿದರು.<br>1. ಮೂರನೇ ಕಕ್ಷಗಾರರುಗಳಾದ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬಳ್ಳಾರಿ ಇವರುಗಳ ಮುಖಾಂತರ (third party inspection) ಪಿಠೋಪಕರಣ ಪರಿಶೀಲನೆ ಮಾಡಿ ನೀಡಿದ ವರದಿ ಆಧಾರದ ಮೇಲೆ ನಂದಿ ಎಂಟರ್‌ಪ್ರೈಸಸ್ ಇವರಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.<br>
<table>
<tr><th>Tender and amount</th><th>Phase-1 Payment to bidder</th><th>Phase-2 Payment to bidder</th><th>Phase-3 Payment to bidder</th><th>Total spent</th></tr>
<tr><td>FURNITURE<br>5,52,02,282/-</td><td>2,93,77,499/-<br>18.11.2022</td><td>1,30,00,000/-<br>24.01.2023</td><td>1,28,24,783/-<br>05.03.2024</td><td>5,52,02,282/-</td></tr>
</table>
2. 27.06.2024ರಂದು ಕಾರ್ಯನಿರ್ವಾಹಕ ಅಭಿಯಂತರರು ಬಳ್ಳಾರಿ, ಇವರು ರಾಯಚೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಸೋಲಾರ್ ಬೀದಿ ದೀಪಗಳ ಪೂರೈಕೆ ಬಗ್ಗೆ ಪರಿವೀಕ್ಷಣೆ ವರದಿಯನ್ನು ನೀಡಿದ್ದು,<br>1. 24 W LED basad single arm auto dimming solar powerd street lighting<br>2. W Solar Highmast street Light ಗಳನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಅನುಷ್ಠಾನಗೊಂಡಿದ್ದು,<br>3. ಕೆಲಸ ಪೂರ್ಣ ಗೊಂಡ ಹಾಗೂ ಸದರಿ ಉಪಕರಣಗಳ ಗುಣಮಟ್ಟ ಇರುವುದನ್ನು ದೃಢೀಕರಿಸುತ್ತಾರೆ. ಈ ಪೂರ್ಣಗೊಂಡ ಕಾರ್ಯಗಳಿಗೆ ಟೆಂಡರ್‌ದಾರರಿಗೆ ಹಣ ಪಾವತಿ ಮಾಡಬೇಕಾಗುತ್ತದೆ ಎಂದು ತಿಳಿಸಿದರು.<br>3. ಸಿಸಿಟಿವಿ ಕಾಮಗಾರಿ ಪ್ರಗತಿಯಲ್ಲಿರುವುದನ್ನು ದೃಢೀಕರಿಸುತ್ತಾರೆ ಹಾಗೂ ಈ ಕೆಳಗಿನಂತೆ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ಈ ದೃಢೀಕರಣ ವರದಿ ನೀಡಿದ ನಂತರ, ವಿಶ್ವವಿದ್ಯಾಲಯವು ಈ ವರದಿಯನ್ನು ಹಾಗೂ ಬಳಕೆ ಪ್ರಮಾಣ ಪತ್ರ ರಶೀದಿಗಳನ್ನು ಕೆಕೆಆರ್‌ಡಿಬಿ ಮಂಡಳಿಗೆ ಸಲ್ಲಿಸಿದ್ದು, ಬಾಕಿ ಇರುವ ಮೊತ್ತವಾದ 2,46,25,000 (2 ಕೋಟಿ 46 ಲಕ್ಷದ 25 ಸಾವಿರ) ರೂಗಳನ್ನು ವಿಶ್ವವಿದ್ಯಾಲಯದ ಖಾತೆಗೆ ಬಿಡುಗಡೆ ಮಾಡಬೇಕೆಂದು ಪತ್ರ ಬರೆದಿರುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು. ಕೆಕೆಆರ್‌ಡಿಬಿಯಿಂದ ಬಾಕಿ ಹಣ ಬಂದ ನಂತರ, ಕಾಮಗಾರಿ ಪೂರ್ಣಗೊಂಡಿರುವ ಕೆಲಸಗಳಿಗೆ, ನಿಯಮನುಸಾರ ಪೂರ್ಣಗೊಂಡಿರುವ ಕಾಮಗಾರಿ ಹಣದಲ್ಲಿ ಟೆಂಡರ್‌ದಾರರಿಗೆ ಬಾಕಿ ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.</td></tr>
</table>

| Tender and amount | Phase-1 Payment to bidder | Phase-2 Payment to bidder | Phase-3 Payment to bidder | Total spent |
|---|---|---|---|---|
| CCTV TOTAL 2,79,78,000/- | 1,29,68,667/- 19.11.2022 | 53,94,589/- 30.05.2024 | ---- | 1,83,63,256 |

ಕುಲಸಚಿವರು ಮಂಡಿಸಿದ ಈ ವಿಚಾರದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ನಿಯಮನುಸಾರ ಬಾಕಿ ಮೊತ್ತವನ್ನು ನೀಡಬಹುದಾಗಿ, ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು.

04

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಹ್ಯೂಮನ್ ಜೀನೋಮ್ ಪ್ರಾಜೆಕ್ಟ್‌ನ ಕಾರ್ಯದ ಪ್ರಗತಿಯ ಕುರಿತು ಚರ್ಚೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುಮೋದನೆಗೊಂಡಿರುವ ಹ್ಯೂಮನ್ ಜೀನೋಮ್ ಪ್ರಾಜೆಕ್ಟ್ ಅನುಷ್ಠಾನದ ಬಗ್ಗೆ ಕುಲಸಚಿವರು ಸಭೆಯಲ್ಲಿ ಈ ಕೆಳಗಿನಂತೆ ಮಂಡಿಸಿದರು.

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕರ್ನಾಟಕ ಸರ್ಕಾರ, ವಿಶ್ವವಿದ್ಯಾಲಯಕ್ಕೆ ಇವರು ನೀಡಿದ ಆದೇಶದ ಅನುಸಾರ, ಐಟಿಬಿಟಿ ಇಲಾಖೆಯ ಅಧಿಕಾರಿಗಳು ನೀಡುವ ಸಲಹೆ, ಸೂಚನೆಗಳಿಗನುಗುಣವಾಗಿ ಈ ಜೀನೋಮ್ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ತಿಳಿಸಿರುವುದರಿಂದ ವಿಶ್ವವಿದ್ಯಾಲಯವು ಐಟಿಬಿಟಿ ಅಧಿಕಾರಿಗಳೊಂದಿಗೆ ದಿನಾಂಕ 04.04.2024 ರಂದು ವಿಶ್ವವಿದ್ಯಾಲಯದ ಅಧಿಕಾರಿಗಳು, ತಜ್ಞರ ಸಮಿತಿ ಹಾಗೂ ಐಟಿಬಿಟಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಭೆಯಲ್ಲಿ ನಿರ್ಣಯಿಸಿದಂತೆ ಜೀನೋಮ್ ಪ್ರಾಜೆಕ್ಟ್ ಅನುಷ್ಠಾನದಲ್ಲಿ ಸೂಚಿಸಿದ ಕೆಲವು ಮಾರ್ಪಾಡುಗಳನ್ನು ಅಳವಡಿಸಿಕೊಂಡು, ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು.

ಮುಂದುವರೆದು, ಸಾರ್ವಜನಿಕ ಚುನಾವಣೆ ನೀತಿ ಸಂಹಿತೆ ಮುಗಿದ ನಂತರ ಟೆಂಡರ್‌ನಲ್ಲಿ ಪಾಲ್ಗೊಂಡಂತಹ ಬಿಡ್ಡುದಾರರ ತಾಂತ್ರಿಕ ಅರ್ಹತೆ ಹಾಗೂ ಆರ್ಥಿಕ ಅರ್ಹತೆಯನ್ನು ಪರಿಶೀಲಿಸಿ, ಎಸ್‌ಎಮ್ ಎಂಟರ್‌ಪ್ರೈಸಸ್ ಬೆಂಗಳೂರು, ಇವರಿಗೆ ಸಿವಿಲ್ ಕಾಮಗಾರಿಯನ್ನು ಹಾಗೂ ಬಯೋಜೆಡ್ ಥಾನೆ ಮುಂಬೈ, ವೈಜ್ಞಾನಿಕ ಉಪಕರಣಗಳನ್ನು ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ ಎಂದು ತಿಳಿಸಿದರು.

ಮುಂದುವರೆದು, ಕೆಕೆಆರ್‌ಡಿಬಿ ವತಿಯಿಂದ ವಿಶ್ವವಿದ್ಯಾಲಯಕ್ಕೆ ಜೀನೋಮ್ ಪ್ರಾಜೆಕ್ಟ್‌ಗೆ ಒಟ್ಟು 47.32 ಕೋಟಿ ರೂಗಳು ಅನುಮೋದನೆಗೊಂಡಿದ್ದು, ಇದರಲ್ಲಿ ವಿಶ್ವವಿದ್ಯಾಲಯದ ಖಾತೆಗೆ ಅನುಮೋದನೆಗೊಂಡ ಮೊತ್ತದಲ್ಲಿ 18,92,80,200 (18 ಕೋಟಿ 92 ಲಕ್ಷದ 80 ಸಾವಿರದ 200ರೂಗಳನ್ನು, ಅನುಮೋದನೆಗೊಂಡ ಒಟ್ಟು ಮೊತ್ತದ 40%) ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಸ್ಥಾಪನೆಗೊಂಡಿರುವ ಮಾಡ್ಯೂಲರ್ ಲ್ಯಾಬ್‌ಗಳಲ್ಲಿ ಜೀನೋಮ್ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಕೆಲವು ವೈಜ್ಞಾನಿಕ ಉಪಕರಣಗಳನ್ನು ಬಯೋಜೆಡ್ ಥಾನೆ ಮುಂಬೈ, ಇವರಿಂದ ಸರಬರಾಜು ಮಾಡಿಕೊಂಡು ವಿಜ್ಞಾನ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ತಯಾರಿ ಮಾಡಿಕೊಳ್ಳಲಾಗಿರುತ್ತದೆ. ವೈಜ್ಞಾನಿಕ ಉಪಕರಣಗಳ ಸರಬರಾಜು ಮಾಡಿದ ಟೆಂಡರ್‌ದಾರರಿಗೆ ನಿಯಮನುಸಾರ ಉಪಕರಣಗಳ ಬೆಲೆಯ 80% ಮೊತ್ತವನ್ನು ಪಾವತಿಸಲಾಗಿರುತ್ತದೆ. ಪಾವತಿಸಿದ ಮೊತ್ತದ ಮಾಹಿತಿ ಈ ಕೆಳಕಂಡಂತೆ ಇದೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು.

| ದಿನಾಂಕ | ಬಿಡುಗಡೆಯಾದ ಮೊತ್ತ |
|---|---|
| 13.06.2024 | 5,44,33,769 |
| 26.06.2024 | 6,89,78,080 |
| 08.07.2024 | 1,51,59,730 |
| **ಒಟ್ಟು ಮೊತ್ತ** | **13,85,71,579** |

ಮುಂದುವರೆದು, ಈ ಮಹತ್ವಾಕಾಂಕ್ಷಿ ಯೋಜನೆ ಸಂಪೂರ್ಣವಾಗಿ

| | | |
|---|---|---|
| | | ಅನುಷ್ಠಾನಗೊಂಡ ನಂತರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಭಾಗಕ್ಕೆ ಬಹುದೊಡ್ಡ ಶೈಕ್ಷಣಿಕ, ಸಂಶೋಧನಾ ಸಂಸ್ಥೆಯಾಗಿ ಹೊರ ಹೊಮ್ಮುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಈ ಎಲ್ಲಾ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸಭೆಯು ಜಿನೋಮ್ ಸಂಸ್ಥೆ ಸ್ಥಾಪಿಸಲು ಕೈಗೊಂಡ ಎಲ್ಲಾ ಕ್ರಮಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ, ಅನುಮೋದಿಸಿತು. |
| 05 | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಹ್ಯೂಮನ್ ಜೆನೋಮ್ ಪ್ರಾಜೆಕ್ಟ್‌ನ ಅನುಷ್ಠಾನದ ನಿರ್ವಹಣೆಗಾಗಿ 02 ಸಂಶೋಧನಾ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು ಚರ್ಚೆ. | ನಾಲ್ಕನೇ ವಿಷಯದ ಬಗ್ಗೆ ಚರ್ಚಿಸಿದ ನಂತರ ಅದರ ಮುಂದುವರೆದ ಭಾಗವಾಗಿ, ಜಿನೋಮ್ ಪ್ರಾಜೆಕ್ಟ್‌ಗೆ ನಿರ್ವಹಣೆಗಾಗಿ ತುರ್ತಾಗಿ 2 ಸಂಶೋಧನಾ ಸಹಾಯಕರನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬೇಕೆಂದು ಮಾನ್ಯ ಕುಲಪತಿಗಳು ಸಭೆಯಲ್ಲಿ ಮಂಡಿಸಿದರು. ಮುಂದುವರೆದು ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಈ 2 ಸಂಶೋಧನಾ ಸಹಾಯಕರನ್ನು ವಿಶ್ವವಿದ್ಯಾಲಯವು ಪತ್ರಿಕಾ ಪ್ರಕಟಣೆ ಮೂಲಕ ಜಾಹೀರಾತು ನೀಡಿ ವಾಕ್-ಇನ್-ಇಂಟರ್‌ವೀವ್ ನಡೆಸಿ ಆಯ್ಕೆಗೊಳ್ಳುವ ಸಂಶೋಧನಾ ಸಹಾಯಕರಿಗೆ 11 ತಿಂಗಳ ತಾತ್ಕಾಲಿಕ ಆದೇಶವನ್ನು ನೀಡಿ ತಿಂಗಳಿಗೆ 25 ಸಾವಿರ ರೂಗಳ ಸಂಚಿತ ವೇತನವನ್ನು ನಿಗದಿಪಡಿಸಿ ಆದೇಶ ನೀಡಬಹುದಾಗಿ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡು, ಕುಲಪತಿಗಳು ಈ ಕಾರ್ಯವನ್ನು ಅವರ ಅಧ್ಯಕ್ಷತೆಯಲ್ಲಿ ನಡೆಸಬೇಕೆಂದು ನಿರ್ಧರಿಸಿ, ಅನುಮೋದಿಸಲಾಯಿತು. |
| 06 | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಂಜೂರಾದ ಹ್ಯೂಮನ್ ಜೆನೋಮ್ ಪ್ರಾಜೆಕ್ಟ್‌ನ ಕಟ್ಟಡ ನಿರ್ಮಾಣದ ಸಲುವಾಗಿ ಭೂಮಿ ಪೂಜೆ ಮತ್ತು ಶಂಕುಸ್ಥಾಪನೆ ಕುರಿತು ಚರ್ಚೆ. | ಮಾನ್ಯ ಕುಲಪತಿಗಳು ಹ್ಯೂಮನ್ ಜೆನೋಮ್ ಪ್ರಾಜೆಕ್ಟ್‌ನ ಕಟ್ಟಡ ನಿರ್ಮಾಣದ ಸಲುವಾಗಿ ಭೂಮಿ ಪೂಜೆ ಮತ್ತು ಶಂಕುಸ್ಥಾಪನೆಯನ್ನು ಆಗಸ್ಟ್ ತಿಂಗಳ ಮೊದಲನೇಯ ವಾರದಲ್ಲಿ ನಡೆಸಬೇಕೆಂದು ಸಭೆಗೆ ತಿಳಿಸಿ, ಈ ಶಂಕುಸ್ಥಾಪನೆಗೆ ಘನತೆವೆತ್ತ ರಾಜ್ಯಪಾಲರು, ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯ ಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು, ಯೋಜನಾ ಇಲಾಖಾ ಸಚಿವರು, ಐಟಿಬಿಟಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಯ ಶಾಸಕರು, ಸಂಸದರುಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬೇಕೆಂದು ಸಭೆಗೆ ತಿಳಿಸಿದರು. ಕುಲಪತಿಗಳು ವಿವರಿಸಿದ ಈ ವಿಷಯವನ್ನು ಸಭೆಯು ಹಾರ್ಧಿಕವಾಗಿ ಸ್ವಾಗತಿಸಿತು.<br>ವಿಶ್ವವಿದ್ಯಾಲಯವು ಶಂಕುಸ್ಥಾಪನೆ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ನಿರ್ಧರಿಸಿ, ಕುಲಸಚಿವರು ಈ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಬೇಕೆಂದು ಸಭೆಯು ನಿರ್ಧರಿಸಿತು. ಕುಲಸಚಿವರು ಘನತೆವೆತ್ತ ರಾಜ್ಯಪಾಲರು ಹಾಗೂ ಮುಖ್ಯ ಮಂತ್ರಿಗಳು ಈ ಕಾರ್ಯಕ್ರಮಕ್ಕೆ ಬರುವುದಾಗಿ ಒಪ್ಪಿಕೊಂಡಿದ್ದಲ್ಲಿ ವಿಶ್ವವಿದ್ಯಾಲಯದ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಲು ಜಿಲ್ಲಾ ಆಡಳಿತ, ಪೋಲಿಸ್ ಇಲಾಖೆ, ಮಾಧ್ಯಮ ಇಲಾಖೆ ಇವರುಗಳ ಸಂಯೋಜನೆಯಲ್ಲಿ ಕಾರ್ಯಕ್ರಮ ರೂಪಿಸಬೇಕು ಹಾಗೂ ಆವರಣದ ಸ್ವಚ್ಛತೆ, ಆಡಳಿತ ಕಚೇರಿ, ಶೈಕ್ಷಣಿಕ ಸಮುಚ್ಚಯ, ಗ್ರಂಥಾಲಯ, ವಸತಿ ನಿಲಯ, ಉಪಹಾರ ಗೃಹ ಇವುಗಳ ಸಣ್ಣಪುಟ್ಟ ದುರಸ್ತಿ, ಬಣ್ಣ ಹಚ್ಚುವಿಕೆ, ಕಾರ್ಯಕ್ರಮಕ್ಕೆ ತಗಲುವ ಎಲ್ಲಾ ವೆಚ್ಚಗಳು ಸುಮ್ಮಾರು 25 ಲಕ್ಷದಿಂದ 30 ಲಕ್ಷ ತಗಲಬಹುದಾಗಿ ತಿಳಿಸಿದರು. ಸಭೆಯು ಈ ಬಗ್ಗೆ ಕುಲಂಕೂಷವಾಗಿ ಚರ್ಚಿಸಿ, ಈ ಕಾರ್ಯಕ್ರಮಕ್ಕೆ 25 ಲಕ್ಷ ರೂಗಳನ್ನು ಮೀಸಲಿಡಬಹುದಾಗಿ ನಿರ್ಧರಿಸಿ, ಅನುಮೋದಿಸಲಾಯಿತು. |
| 07 | ರಾಯಚೂರು ವಿಶ್ವವಿದ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ 36 ಜನ ಮಾನವ ಸಂಪನ್ಮೂಲವನ್ನು ಪೂರೈಸಿರುವ ಸಿ.ಎಸ್.ಪಿ.ಪಿ ರಾಯಚೂರು ಇವರ ಗುತ್ತಿಗೆ ದಿನಾಂಕ: 22.03.2024 ರಂದು | ರಾಯಚೂರು ವಿಶ್ವವಿದ್ಯಾಲಯದಲ್ಲಿ 36 ಜನ ಬೋಧಕೇತರ ಸಿಬ್ಬಂದಿಗಳನ್ನು ಸರ್ಕಾರದ ಆದೇಶದನ್ವಯ ಹೊರಗುತ್ತಿಗೆ ಆಧಾರದ ಮೇಲೆ ಸಿ.ಎಸ್.ಪಿ.ಪಿ.ಎಮ್ ರಾಯಚೂರು ಇವರಿಂದ ದಿನಾಂಕ 21.03.2023 ರ ಕಾರ್ಯಾದೇಶ ನೀಡಲಾಗಿರುತ್ತದೆ. ಇವರ 1 ವರ್ಷದ ಅವಧಿಯು 22.03.2024ಕ್ಕೆ |

<table>
<tr><td></td><td>ಮುಕ್ತಾಯವಾಗಿರುವುದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸದರಿಯವರ ಗುತ್ತಿಗೆಯನ್ನು ಮುಂದಿನ ಒಂದು ವರ್ಷದ ಮಟ್ಟಿಗೆ ಆದೇಶಿರುವುದನ್ನು ಅನುಸಮರ್ಥಿಸುವ ಕುರಿತು ಚರ್ಚೆ.</td><td>ಮುಕ್ತಾಯಗೊಂಡಿರುತ್ತದೆ. ದಿನಾಂಕ 16.03.2024 ರಿಂದ 04.06.2024 ರವರೆಗೆ ಸಾರ್ವಜನಿಕ ಲೋಕ ಸಭಾ ಚುನಾವಣೆ ಘೋಷಣೆಗೊಂಡಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದು ಯಾವುದೇ ಹೊಸ ಟೆಂಡರ್ ಘೋಷಣೆ ಮಾಡಲು ಅವಕಾಶವಿಲ್ಲದ ಕಾರಣ ವಿಶ್ವವಿದ್ಯಾಲಯವು ಈ 36 ಹೊರಗುತ್ತಿಗೆ ನೌಕರರನ್ನು 3 ತಿಂಗಳ ಕಾಲ ಅಥವಾ ಚುನಾವಣೆ ನೀತಿ ಸಂಹಿತೆ ಮುಗಿಯುವವರೆಗೆ ಮುಂದುವರೆಸಲು ತಿಳಿಸಿರುತ್ತದೆ. ಈ ವಿಚಾರವಾಗಿ ಸಿ.ಎಸ್.ಪಿ.ಪಿ.ಎಮ್ ಅವರು ಕೇವಲ 3 ತಿಂಗಳ ಕಾಲಕ್ಕೆ ಈ 36 ಗುತ್ತಿಗೆ ನೌಕರರನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ 3 ತಿಂಗಳ ನಂತರ ಇವರ ಭವಿಷ್ಯದ ಪರಿಸ್ಥಿತಿಯು ಡೋಲಾಯಮಾನವಾಗುವ ಸಂಭವವಿರುವುದರಿಂದ 3 ತಿಂಗಳ ವಿಸ್ತರಣೆಗೆ ನಿರಾಕರಿಸಿ, ಮುಂದಿನ 1 ವರ್ಷ ಅಥವಾ 11 ತಿಂಗಳ ವಿಸ್ತರಣೆ ನೀಡಿದ್ದಲ್ಲಿ ಇವರ ಸೇವೆಯನ್ನು ಈಗಾಗಲೇ ಇರುವ ಕರಾರಿನಂತೆ ವಿಶ್ವವಿದ್ಯಾಲಯಕ್ಕೆ ಒದಗಿಸುವುದಾಗಿ, ಸಿ.ಎಸ್.ಪಿ.ಪಿ.ಎಮ್ ಗುತ್ತಿಗೆದಾರರು ಪತ್ರದ ಮುಖಾಂತರ ತಿಳಿಸಿರುತ್ತಾರೆ. ಮಾನ್ಯ ಕುಲಪತಿಗಳು ಈ ಎಲ್ಲಾ ವಿಚಾರಗಳನ್ನು ಗಮನಿಸಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ, ಚುನಾವಣೆ ನೀತಿ ಸಂಹಿತೆಯಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ನಿಭಾಯಿಸಲು ದಿನಾಂಕ 23.03.2024ರಿಂದ ದಿನಾಂಕ 21.03.2025ರವರೆಗೆ ಗುತ್ತಿಗೆಯನ್ನು ಮುಂದುವರೆಸಲು ನಿರ್ಧರಿಸಿ, ಸಿ.ಎಸ್.ಪಿ.ಪಿ.ಎಮ್ ಅವರಿಗೆ ಆದೇಶ ನೀಡಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಮಾನ್ಯ ಕುಲಪತಿಗಳು ತೆಗೆದುಕೊಂಡ ನಿರ್ಧಾರವನ್ನು ಒಪ್ಪಿಕೊಂಡು, 1 ವರ್ಷ ಅವಧಿಗೆ ನೀಡಿರುವ ಆದೇಶವನ್ನು ಅನುಸಮರ್ಥಿಸಲಾಯಿತು.</td></tr>
<tr><td>08</td><td>2023–24ನೇ ಸಾಲಿನಲ್ಲಿ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವ ಧನ ಹೆಚ್ಚಿಸುವ ಕುರಿತು ಚರ್ಚೆ.</td><td>ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ಮಾನ್ಯ ಕುಲಪತಿಗಳಿಗೆ ಮನವಿಯನ್ನು ಸಲ್ಲಿಸಿ, ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ನೀಡುತ್ತಿರುವ ವೇತನವನ್ನು ಪರಿಗಣಿಸಿ, ರಾಯಚೂರು ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೂ ಕೂಡ, ಅದೇ ರೀತಿ ವೇತನವನ್ನು ನೀಡಬೇಕೆಂದು ಕೋರಿರುತ್ತಾರೆ. ಮಾನ್ಯ ಕುಲಪತಿಗಳು ರಾಯಚೂರು ವಿಶ್ವವಿದ್ಯಾಲಯವು ಈಗಾಗಲೇ ಈ ಕೆಳಕಂಡಂತೆ ವೇತನವನ್ನು ನೀಡುತ್ತಿದೆ ಎಂದು ತಿಳಿಸಿದರು.<br><br>2023–24 ನೇ ಸಾಲಿನಲ್ಲಿ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಆಯ್ಕೆಯಾದ ಪೂರ್ಣಕಾಲಿಕ/ಅರೇ ಕಾಲಿಕ ಅತಿಥಿ ಉಪನ್ಯಾಸಕರುಗಳ ವೇತನ ವಿವರ.<br><br><table>
<tr><th>Sl. No</th><th>Guest Lecture</th><th>Per Month Salary</th></tr>
<tr><td>01</td><td>Full Time Guest Lecturer (Ph.D+K-SET/NET)</td><td>Rs. 38,000=00</td></tr>
<tr><td>02</td><td>Full Time Guest Lecturer (Ph.D/ K-SET/NET)</td><td>Rs. 35,000=00</td></tr>
<tr><td>03</td><td>Full Time Guest Lecturer (Only PG)</td><td>Rs. 28,000=00</td></tr>
<tr><td>04</td><td>Part Time Guest Lecturer (Ph.D+K-SET/NET)</td><td>Rs. 20,000=00</td></tr>
<tr><td>05</td><td>Part Time Guest Lecturer (Ph.D/K-SET/NET)</td><td>Rs. 18,000=00</td></tr>
<tr><td>06</td><td>Part Time Guest Lecturer (Only PG)</td><td>Rs. 16,000=00</td></tr>
</table><br>ಮುಂದುವರೆದು, ಸಭೆಯಲ್ಲಿ ಈ ವಿಚಾರದ ಬಗ್ಗೆ</td></tr>
</table>

| | | |
|---|---|---|
| | | ಕುಲಂಕೂಷವಾಗಿ ಚರ್ಚಿಸಿ, ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು ಹಾಗೂ ಅರೆಕಾಲಿಕ ಅತಿಥಿ ಉಪನ್ಯಾಸಕರಿಗೂ 2 ಸಾವಿರ ರೂಗಳ ವೇತನವನ್ನು ಆಗಸ್ಟ್ ತಿಂಗಳಿನಿಂದ ಹೆಚ್ಚಿಸಿ, ಜಾರಿಗೊಳಿಸಲು ನಿರ್ದೇಶಿಸಿ, ಅನುಮೋದಿಸಲಾಯಿತು. ಈ ಹೆಚ್ಚಳ ಮಾಡಿದ ವೇತನವನ್ನು ಹಣಕಾಸು ಸಮಿತಿಯಲ್ಲಿ ಮಂಡಿಸಬೇಕೆಂದು ಹಣಕಾಸು ಅಧಿಕಾರಿಗಳಿಗೆ ಕುಲಸಚಿವರು ನಿರ್ದೇಶಿಸಬೇಕೆಂದು ಸಭೆಯು ತಿಳಿಸಿತು. |
| 09 | ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಪೂರ್ವ ತಯಾರಿ ಕುರಿತು ಚರ್ಚೆ. | ಕುಲಸಚಿವರು ಮೌಲ್ಯಮಾಪನ ಇವರು 2022-23ನೇ ಸಾಲಿನ ಸ್ನಾತಕ/ಸ್ನಾತಕೋತ್ತರ/ಬಿಎಡ್/ಬಿಪಿಎಡ್ ಪದವಿ ವಿದ್ಯಾರ್ಥಿಗಳು ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ಬಾಚ್ ಆಗಿ ಹೊರಹೊಮ್ಮಿದ್ದು, ಸುಮಾರು 5000 ವಿದ್ಯಾರ್ಥಿಗಳು ಸ್ನಾತಕ/ಸ್ನಾತಕೋತ್ತರ ಪದವಿ ಕೋರ್ಸ್‌ನ್ನು ಮುಕ್ತಾಯಗೊಳಿಸಿರುತ್ತಾರೆ. ಮುಂದುವರೆದು, 2023-24 ನೇ ಸಾಲಿನಿಂದ, ಸ್ನಾತಕ ಪದವಿ ವಿದ್ಯಾರ್ಥಿಗಳು ಹೊರ ಬರಲಿದ್ದಾರೆ ಎಂದು ತಿಳಿಸಿದರು. ಶಿಷ್ಟಾಚಾರದಂತೆ ವಿಶ್ವವಿದ್ಯಾಲಯವು ರಾಯಚೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ನಡೆಸುವ ಮುಖಾಂತರ ಪದವಿಗಳನ್ನು, ರ್‍ಯಾಂಕ್, ಪ್ರಮಾಣ ಪತ್ರ, ಚಿನ್ನದ ಪದಕ, (ಪ್ರಾಯೋಜಿಕತ್ವ ನೀಡಿದ್ದಲ್ಲಿ) ನೀಡುವ/ವಿತರಿಸುವ ಜವಾಬ್ದಾರಿ ಹೊಂದಿರುತ್ತದೆ. ರಾಯಚೂರು ವಿಶ್ವವಿದ್ಯಾಲಯವು ಪ್ರಥಮ ಬಾರಿಗೆ ಘಟಿಕೋತ್ಸವನ್ನು ಸೆಪ್ಟಂಬರ್/ಅಕ್ಟೋಬರ್ ತಿಂಗಳಲ್ಲಿ ನಡೆಸಲು ಉದ್ದೇಶಿಸಿದ್ದು, ಇದಕ್ಕೆ ಎಲ್ಲಾ ತಯಾರಿಗಳನ್ನು ನಡೆಸುತ್ತಿದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಪ್ರಥಮ ಘಟಿಕೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲು ತೀರ್ಮಾನಿಸಿದರು. ಮುಂದುವರೆದು, ಮಾನ್ಯ ಕುಲಪತಿಗಳು ಪ್ರಥಮ ಘಟಿಕೋತ್ಸವ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ವಿವರಿಸಿದರು. ಗಣ್ಯರಿಗೆ ಪ್ರಯಾಣ ಭತ್ಯೆ, ವಸತಿ, ಊಟದ ವ್ಯವಸ್ಥೆ, ವಿಶ್ವವಿದ್ಯಾಲಯದ ಆವರಣದಲ್ಲಿ ಇರುವ ಎಲ್ಲಾ ಕಟ್ಟಡಗಳಿಗೆ ಬಣ್ಣ ಹಚ್ಚುವುದು, ಆವರಣದ ಸ್ವಚ್ಚತೆ, ಘಟಿಕೋತ್ಸವ ದಿನದ ಊಟದ ವ್ಯವಸ್ಥೆ, ಪರೀಕ್ಷಾ ವಿಭಾಗದಕ್ಕೆ ಬೇಕಾಗುವಂತಹ ಸಾಮಾಗ್ರಿಗಳು ಹಾಗೂ ಇತರೆ ಎಲ್ಲಾ ಖರ್ಚುವೆಚ್ಚಗಳನ್ನು ಭರಿಸಲು ಸರಿಸುಮಾರು 25 ಲಕ್ಷರೂಗಳಿಂದ 30 ಲಕ್ಷರೂಗಳವರೆಗೆ ಆಗಬಹುದೆಂದು ತಿಳಿಸಿದರು. ಇದನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ, ಮಾನ್ಯ ಕುಲಪತಿಗಳು ನೀಡಿದ ಖರ್ಚಾಗಬಹುದಾದ ವಿವರಣೆಗಳನ್ನು ಪರಿಗಣಿಸಿ, 25 ಲಕ್ಷರೂಗಳನ್ನು ಪ್ರಥಮ ಘಟಿಕೋತ್ಸವದ ಅಂದಾಜು ವೆಚ್ಚವೆಂದು ಪರಿಗಣಿಸಿ, ಘಟಿಕೋತ್ಸವಕ್ಕೆ ಖರ್ಚು ಮಾಡಲು ಸಭೆಯು ತೀರ್ಮಾನಿಸಿ, ಅನುಮೋದಿಸಿತು. |
| 10 | ರಾಯಚೂರು ವಿಶ್ವವಿದ್ಯಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಸಭಾಂಗಣವನ್ನು ಫರ್ನಿಸಿಂಗ್ ಮಾಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಆಡಳಿತ ವಿಭಾಗದ ಮೊದಲನೆಯ ಮಹಡಿಯಲ್ಲಿ 2 ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಈ ಕಟ್ಟಡವನ್ನು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳನ್ನು ನಡೆಸುವ ಸಭಾಂಗಣವೆಂದು ಗುರುತಿಸಿದ್ದು, ಈ ಸಭಾಂಗಣವನ್ನು ವಿವಿಧುದ್ದೇಶಗಳಿಗೆ ಉಪಯೋಗಿಸುವ ಸಲುವಾಗಿ, ಫರ್ನಿಸಿಂಗ್ ಮಾಡುವ ಅವಶ್ಯಕತೆ ಇದೆ ಎಂದು ಸಭೆಗೆ ಕುಲಸಚಿವರು ತಿಳಿಸಿದರು. ಸಭಾಂಗಣದಲ್ಲಿ ವುಡನ್ ಪ್ಯಾನಲಿಂಗ್, ಫ್ಲೋರ್ ಮ್ಯಾಟಿಂಗ್, ಸೆಂಟರ್ ಎಸಿ, ಫಾಲ್‌ರೂಫಿಂಗ್ ಹಾಗೂ ಇನ್ನಿತರ ತಾಂತ್ರಿಕ ಸೌಲಭ್ಯವುಳ್ಳ ಒಂದು ಸುಸಜ್ಜಿತ ಸಭಾಂಗಣವಾಗಿ ಕೆಪಿಟಿಟಿ ನಿಯಮನುಸಾರ ಟೆಂಡರ್ ಕರೆಯಬೇಕಾಗುತ್ತದೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ, ಕೆಪಿಟಿಟಿ ಪ್ರಕಾರ ಟೆಂಡರ್ ಕರೆಯಲು ಅನುಮೋದನೆ ನೀಡಿತು.<br>ಮುಂದುವರೆದು ಕುಲಸಚಿವರು ಮೌಲ್ಯಮಾಪನ ಇವರು ಮೌಲ್ಯಮಾಪನ ನಡೆಸಲು ನಿರ್ಮಿಸಿರುವ ನೂತನ Truss ನಲ್ಲೂ ಸಹಿತ ಕೆಲವು ಫರ್ನಿಸಿಂಗ್ ವರ್ಕ್/ತಾಂತ್ರಿಕ ಸೌಲಭ್ಯಗಳನ್ನು ನೀಡಬೇಕು ಎಂದು ತಿಳಿಸಿದರು. ಸಭೆಯು ಸಿಂಡಿಕೇಟ್ ಹಾಲ್ |

<table>
<tr><td></td><td></td><td>ಫರ್ನಿಸಿಂಗ್‌ಗೆ ಕರೆಯುವ ಟೆಂಡರ್‌ನಲ್ಲಿಯೇ ಈ ಕೆಲಸಗಳನ್ನು ಸೇರಿಸಿ, ಟೆಂಡರ್ ಕರೆಯಬೇಕೆಂದು ನಿರ್ಧರಿಸಿ, ಅನುಮೋದನೆ ನೀಡಲಾಯಿತು.</td></tr>
<tr><td>11</td><td>ರಾಯಚೂರು ವಿಶ್ವವಿದ್ಯಾಲಯದ ಕೌಶಲ್ಯಾಭಿವೃದ್ಧಿ ಘಟಕಕ್ಕೆ ಸಮಾಲೋಚರನ್ನಾಗಿ (Skill Development Consultant) ಎಂಪ್ಯಾನಲ್‌ಮೆಂಟ್ ಮಾಡಿಕೊಂಡಿರುವ ಶ್ರೀ. ದಿನೇಶ ಬಾಳಿಗಾ ಇವರನ್ನು ಮುಂದುವರೆಸುವ ಆದೇಶವನ್ನು ಅನುಸಮರ್ಥಿಸುವ ಕುರಿತು.</td><td>ರಾಯಚೂರು ವಿಶ್ವವಿದ್ಯಾಲಯದ ಕೌಶಲ್ಯಾಭಿವೃದ್ಧಿ ಘಟಕಕ್ಕೆ ಸಮಾಲೋಚರನ್ನಾಗಿ (Skill Development Consultant) ಎಂಪ್ಯಾನಲ್‌ಮೆಂಟ್ ಮಾಡಿಕೊಂಡಿರುವ ಶ್ರೀ. ದಿನೇಶ ಬಾಳಿಗಾ ಇವರ ಕರ್ತವ್ಯದ ಅವಧಿ ಮಾರ್ಚ್–2024ರಂದು ಮುಗಿದಿರುವುದರಿಂದ ಮುಂದಿನ ಅವಧಿಗೆ ಸಮಾಲೋಚರನ್ನಾಗಿ ಮುಂದುವರೆಸುವುದು ವಿಶ್ವವಿದ್ಯಾಲಯಕ್ಕೆ ಅವಶ್ಯಕವಾಗಿರುವುದರಿಂದ ಮಾನ್ಯ ಕುಲಪತಿಗಳು ಶ್ರೀ. ದಿನೇಶ ಬಾಳಿಗಾ ಅವರನ್ನು Skill Development Consultant ಎಂದು ಮುಂದುವರೆಸಿ, ಸದರಿಯವರ ಸೇವೆಯನ್ನು ಮುಂದಿನ 11 ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಿ, ಪ್ರತಿ ತಿಂಗಳಿಗೆ 35 ಸಾವಿರ ರೂಗಳ ಸಂಚಿತ ವೇತನ ನಿಗದಿಪಡಿಸಿ, ಏಪ್ರೀಲ್ ತಿಂಗಳಿಂದ ಕುಲಪತಿಗಳು ಅನುಮೋದನೆ ನೀಡಿರುತ್ತಾರೆ, ಈ ಅನುಮೋದನೆಯಂತೆ ಕುಲಸಚಿವರು ಆದೇಶ ನೀಡಿರುತ್ತಾರೆ. ವಿಶ್ವವಿದ್ಯಾಲಯವು ನೀಡಿರುವ ಆದೇಶದಂತೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಶ್ರೀ. ದಿನೇಶ ಬಾಳಿಗಾ ಅವರಿಗೆ ನೀಡಿರುವ ಆದೇಶಕ್ಕೆ ಒಪ್ಪಿಗೆ ಸೂಚಿಸಿ, ಅನುಸಮರ್ಥಿಸಲಾಯಿತು.</td></tr>
<tr><td>12</td><td>ರಾಯಚೂರು ವಿಶ್ವವಿದ್ಯಾಲಯದ ಕಾನೂನು ಘಟಕಕ್ಕೆ ಎಂಪ್ಯಾನಲ್‌ಮೆಂಟ್ ಮಾಡಿಕೊಂಡಿರುವ ಕಾನೂನು ಸಲಹೆಗಾರರಿಗೆ ಗೌರವಧನ ನಿಗದಿ ಪಡಿಸುವ ಕುರಿತು.</td><td>ಮಾನ್ಯ ಕುಲಪತಿಗಳಿಗೆ ದಿನಾಂಕ 21.02.2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅಧಿಕಾರದನ್ವಯ ಬೇರೆ ವಿಶ್ವವಿದ್ಯಾಲಯಗಳಲ್ಲಿ ನೀಡುತ್ತಿರುವ ಗೌರವಧನವನ್ನು ಪರಿಗಣಿಸಿ, ಸಭೆಗೆ ಕುಲಪತಿಗಳು ಕುಲಂಕೂಷವಾದ ಪಟ್ಟಿಯನ್ನು ಪ್ರಸ್ತುತಪಡಿಸಿದರು.
<table>
<tr><th>SL. No.</th><th>Particulars</th><th>Rate of remuneration to the Legal counsels in High Court of Karnataka</th><th>Rate of Remuneration to the Legal counsels in District / Taluka Courts in Karnataka</th></tr>
<tr><td>1.</td><td>Writ Petition/Writ Appeal/ Contempt of Court Proceeding</td><td>Rs 16,000 for all cases<br>Rs 4,000 for Expenses</td><td>Rs 10,000 for all Cases</td></tr>
<tr><td>2.</td><td>In case, of two or more Write Petition/ Writ Appeals/Contempt cases involving similar issue are heard and decided together as connected cases</td><td>Rs 2,000/- each of the remaining cases subject to maximum of Rs. 30,000/- in all (connected cases)</td><td>Rs 10,000/- for all Cases<br>Rs 20,000/- Maximum (in connected cases)</td></tr>
<tr><td>3.</td><td>Legal opinion<br>a) Major importance- Financial implication<br>b) Minor importance- Service matters (As determined by the University)</td><td>Per case Rs.5,000/-<br>Per case Rs. 2,000/-</td><td>Rs. 5,000/- per case<br>Rs. 2,000/- per case</td></tr>
<tr><td>4</td><td>Filling of caveat</td><td>Per case Rs. 5,000/-</td><td>Per case Rs, 5,000/-</td></tr>
<tr><td>5</td><td>Scrutiny of documents like, title deeds etc of the members of the staff</td><td>Per case Rs. 2,000/-</td><td>Per case Rs. 2,000/-</td></tr>
<tr><td>6</td><td>Legal Notice/ Reply legal Notice</td><td>Per case= 2,000/-</td><td>Per case-2,000/-</td></tr>
</table></td></tr>
</table>

| | | | |
|---|---|---|---|
| 7 | Criminal/civil Suits/Appeal (The above rates of fee shall be applicable to case where the University is respondent) | Te Scale of fees as prescribed by the Govt. of Karnataka | The Scale of fees as prescribed by the Govt. of Karnataka |
| 8. | In case University files Writ petition/Writ Appeal as a Petioner/Appellant | Per case 25,000/- | Per case 10,000/- |
| | | The above rates are inclusive of stationery and Typing charges. | The above rates are inclusive of stationery and typing charges. |

ಈ ಗೌರವಧನದ ಪಟ್ಟಿಯ ಅನುಸಾರ ಸಭೆಯಲ್ಲಿ ಚರ್ಚಿಸಿ, ಪಟ್ಟಿಯಲ್ಲಿ ನೀಡಿರುವ ಗೌರವಧನದ ಅನುಸಾರ ವಿಶ್ವವಿದ್ಯಾಲಯದ ಕಾನೂನು ಘಟಕಕ್ಕೆ ಎಂಪ್ಯಾನಲ್ಡ್ ಮಾಡಿಕೊಂಡಿರುವ ಕಾನೂನು ಸಲಹೆಗಾರರಿಗೆ/ವಕೀಲರಿಗೆ ಈ ದರಗಳನ್ನು ನೀಡಲು ಸಭೆಯಲ್ಲಿ ಅನುಮೋದಿಸಲಾಯಿತು.

| | | |
|---|---|---|
| 13 | ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾದ 201 (36+165) ಬೋಧಕೇತರ (ಗ್ರೂಪ್ಎ.ಬಿ.ಸಿ.ಡಿ) ಹುದ್ದೆಗಳಿಗೆ ಸರ್ಕಾರದ 371 ಜೆ ಉದ್ಯೋಗ ಮೀಸಲಾತಿಯನ್ನು ವರ್ಗಿಕರಿಸಿ ಅಧಿಸೂಚಿಸಿರುವುದನ್ನು ಅನುಮೋದಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾದ 201 (36+165) ಬೋಧಕೇತರ (ಗ್ರೂಪ್ಎ.ಬಿ.ಸಿ.ಡಿ) ಹುದ್ದೆಗಳಿಗೆ ಸರ್ಕಾರವು ನೀಡಿರುವ 371 ಜೆ ಉದ್ಯೋಗ ಮೀಸಲಾತಿಯನ್ನು ವರ್ಗೀಕರಿಸಿ, ಆದೇಶ ನೀಡಿರುತ್ತದೆ. ಸರ್ಕಾರ ನೀಡಿರುವ ಈ ಆದೇಶವನ್ನು ಈ ವಿಶ್ವವಿದ್ಯಾಲಯವು ಅಧಿಸೂಚನೆ ಮಾಡಬೇಕಾಗುತ್ತದೆ ಎಂದು ಸಭೆಗೆ ಕುಲಸಚಿವರು ತಿಳಿಸಿದರು. ಸಭೆಯು ಇದನ್ನು ಚರ್ಚಿಸಿ, 371 ಜೆ ಉದ್ಯೋಗ ಮೀಸಲಾತಿ ಅಧಿಸೂಚನೆಯನ್ನು ಹೊರಡಿಸಲು ಒಪ್ಪಿಗೆ ನೀಡಿ, ಅನುಮೋದಿಸಿತು. |
| 14 | ರಾಯಚೂರು ವಿಶ್ವವಿದ್ಯಾಲಯದ ನಗರ ಕಛೇರಿ ಹಾಗೂ ಮಾನ್ಯ ಕುಲಪತಿಗಳ ಗೃಹ ಕಚೇರಿಯ ಅವಧಿಯನ್ನು ವಿಸ್ತರಿಸುವ ಕುರಿತು ಚರ್ಚೆ. | 2020 ರಲ್ಲಿ ರಾಯಚೂರು ವಿಶ್ವವಿದ್ಯಾಲಯ ಸ್ಥಾಪನೆಗೊಂಡ ಸಂದರ್ಭದಲ್ಲಿ ಕೋವಿಡ್19 ಸಾಂಕ್ರಾಮಿಕ ರೋಗ ಹರಡಿದ್ದು, ವಿಶ್ವವಿದ್ಯಾಲಯದಲ್ಲಿ ಇಂಟರನೆಟ್, ವಿದ್ಯುತ್ ಹಾಗೂ ಇನ್ನಿತರ ಮೂಲಸೌಕರ್ಯಗಳು ಇಲ್ಲದ ಕಾರಣ ಸರ್ಕಾರ ನಡೆಸುತ್ತಿದ್ದ ಆನ್‌ಲೈನ್ ಸಭೆಗಳಿಗೆ ತೊಂದರೆ ಆಗುತ್ತಿರುವ ಕಾರಣದಿಂದ ವಿಶ್ವವಿದ್ಯಾಲಯದ ದೈನಂದಿನ ಕಾರ್ಯಗಳಿಗೆ ಒಂದು ನಗರ ಕಛೇರಿಯನ್ನು ಸ್ಥಾಪಿಸಲು ತೀರ್ಮಾನಿಸಿ, ನಿಯಮನುಸಾರ PWD ದರಗಳ ಅನ್ವಯದಂತೆ 3 ವರ್ಷದ ಅವಧಿಗೆ ರಾಯಚೂರು ವಿಶ್ವವಿದ್ಯಾಲಯದ ನಗರ ಕಚೇರಿ/ಸಭೆಯ ಸಭಾಂಗಣ/ಅತಿಥಿಗೃಹವನ್ನು ಪಡೆಯಲಾಗಿರುತ್ತದೆ. ಏಪ್ರೀಲ್ 2021 ರಿಂದ ವಿಶ್ವವಿದ್ಯಾಲಯದ ನಗರ ಕಚೇರಿ ಸ್ಥಾಪನೆಯಾಗಿದ್ದು, ಮಾರ್ಚ್ 31, 2024ಕ್ಕೆ ಅವಧಿ ಮುಗಿದಿರುತ್ತದೆ. ಏಪ್ರೀಲ್ 2024 ರಲ್ಲಿ ಸಾರ್ವಜನಿಕ ಚುನಾವಣೆ ನಡೆಯುತ್ತಿರುವ ಕಾರಣ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣದಿಂದ ಸಿಂಡಿಕೇಟ್ ಸಭೆ ನಡೆದಿರುವುದಿಲ್ಲ. ಕಾರಣ ನಗರ ಕಚೇರಿಯು ವಿಶ್ವವಿದ್ಯಾಲಯಕ್ಕೆ ಅವಶ್ಯಕತೆವಿರುವುದರಿಂದ ಈಗಾಗಲೇ ಇರುವ ಆದೇಶದನುಸಾರ (As per the PWD Rates) ನಿಗದಿತ ದರದಂತೆ ತಿಂಗಳಿಗೆ ರೂ.39,640 ಬಾಡಿಗೆ ಅನುಸಾರ ಮುಂದಿನ 3 ವರ್ಷಗಳವರೆಗೆ ಮುಂದುವರೆಸುವ ನಿರ್ಧಾರವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.<br>ಮುಂದುವರೆದು, ಮಾನ್ಯ ಕುಲಪತಿಗಳಿಗೆ ಗೃಹ ಕಚೇರಿಯನ್ನು ಜನೆವರಿ 2021 ರಿಂದ ರಾಯಚೂರು ನಗರದಲ್ಲಿ ಸ್ಥಾಪಿಸಲಾಗಿರುತ್ತದೆ. ಮಾನ್ಯ ಕುಲಪತಿಗಳ ಗೃಹ ಕಚೇರಿಗೆ ಬೇಕಾಗುವ ಅಗತ್ಯ ಮೂಲಭೂತ ಸೌಕರ್ಯಗಳೊಳಗೊಂಡಂತೆ ಕಂಪ್ಯೂಟರ್, ಪ್ರಿಟಿಂಗ್, ಟೇಬಲ್, ಶೋಫಾ, ಎಸಿಗಳನ್ನು ವಿಶ್ವವಿದ್ಯಾಲಯವು ಒದಗಿಸಿರುತ್ತದೆ. ಈ ಗೃಹ ಕಚೇರಿ ಬಾಡಿಗೆಯನ್ನು ಮಾನ್ಯ ಕುಲಪತಿಗಳು ಸ್ವತ: ಭರಿಸಿರುತ್ತಾರೆ.<br>ಮಾನ್ಯ ಕುಲಪತಿಗಳ ಅವಧಿಯು ನವೆಂಬರ್ 2024 ರಂದು ಕೊನೆಗೊಳ್ಳುವ ಕಾರಣದಿಂದ, ಕುಲಪತಿಗಳ ಗೃಹ ಕಚೇರಿಯಲ್ಲಿರುವ |

| | | |
|---|---|---|
| | | ವಸ್ತುಗಳನ್ನು ವಿಶ್ವವಿದ್ಯಾಲಯಕ್ಕೆ ಸ್ಥಳಾಂತರಿಸಬೇಕಾ ಅಥವಾ ಹಾಗೇ ಅದನ್ನು ಮುಂದುವರೆಸಬೇಕಾ ಎನ್ನುವುದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಕುಲಪತಿಗಳ ಗೃಹ ಕಚೇರಿಯನ್ನು ಇನ್ನೂ 3 ವರ್ಷಕ್ಕೆ ಮುಂದುವರೆಸಿ, ಆ ಬಾಡಿಗೆಯನ್ನು ನಿಯಮನುಸಾರ ಕುಲಪತಿಗಳ ಅವಧಿ ಮುಗಿದ ನಂತರ ವಿಶ್ವವಿದ್ಯಾಲಯವು ಭರಿಸಿ ಕೊಂಡು ಹೋಗಲು ತೀರ್ಮಾನಿಸಲಾಯಿತು.<br><br>ಮುಂಬರುವ ಹೊಸ ಕುಲಪತಿಗಳು ಈ ಎರಡು ಕಚೇರಿಗಳ ಅವಶ್ಯಕತೆಗೆ ಅನುಗುಣವಾಗಿ ಮುಂದಿನ ನಿರ್ಧಾರವನ್ನು ಕೈಗೊಳ್ಳಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಎರಡು ಕಚೇರಿಗಳನ್ನು ತೆರವು ಮಾಡಲು ನಿರ್ಧರಿಸಿದ್ದಲ್ಲಿ 3 ತಿಂಗಳ ಕಾಲ ಮುಂಚಿತವಾಗಿ ನೋಟಿಸ್ ನೀಡಿ, ಮುಂದಿನ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. |
| 15 | **ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ.** | |
| 1. | ರಾಯಚೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಸ್ಪರ್ಧಾತ್ಮಕ ಪರೀಕ್ಷ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ. | ಮಾನ್ಯ ಕುಲಪತಿಗಳು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಪೈಪೋಟಿ ನೀಡಲು, ಉತ್ತಮ ತರಬೇತಿ ಪಡೆದರೆ ಮಾತ್ರ ಸಾಧ್ಯ, ಈ ನಿಟ್ಟಿನಲ್ಲಿ ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷ ತರಬೇತಿ ಕೇಂದ್ರವನ್ನು ತೆರೆಯಲು ಪ್ರಸ್ತಾವನೆಯನ್ನು ಮಂಡಿಸಿದರು. ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ವಿಶ್ವವಿದ್ಯಾಲಯದ ಈ ನಡೆಯಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ನಿರ್ಧರಿಸಿ, ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.<br>ಮುಂದುವರೆದು, ಈ ತರಬೇತಿ ಕೇಂದ್ರಕ್ಕೆ ತಗಲುವ ವೆಚ್ಚವನ್ನು ಸರ್ಕಾರದ ಅನುದಾನ/ಸಮಾಜ ಕಲ್ಯಾಣ ಇಲಾಖೆ ಅನುದಾನ/ಪ್ರಾಯೋಜಿಕತ್ವ/ಖಾಸಗಿ ಸಂಸ್ಥೆಗಳಿಂದ ಪ್ರಾಯೋಜಿಕತ್ವ ಪಡೆದುಕೊಂಡು ನಡೆಸಬೇಕೆಂದು ತೀರ್ಮಾನಿಸಲಾಯಿತು. |
| 2. | ರಾಯಚೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ ಅನುಸಾರ ಬೋಧಕರ ನೇಮಕಾತಿ ಮಂಡಳಿ ರಚಿಸುವ ಬಗ್ಗೆ. | The statutes Relating to Appointment and promoting to Appointment and Promotion of teachers and other academic Stafe and measures for the maintenance of standards in Higher Education in the Raichur University, as per the UGC Regulations 2018. ರ ಅನ್ವಯ ಪ್ರಕಾರ ಖಂಡಿಕೆ 5 ರಲ್ಲಿ ಬೋಧಕರ ನೇಮಕಾತಿ ಮಂಡಳಿ ರಚಿಸುವ ಬಗ್ಗೆ ಮಾನ್ಯ ಕುಲಪತಿಗಳು ಪರಿನಿಯಮಾವಳಿ 5 ರ ಪ್ರಕಾರ ರೂಪಿಸಲು 5 (iii) ಮತ್ತು (vi) ಪ್ರಕಾರ ವಿಷಯ ತಜ್ಞರ ಸಮಿತಿ ರಚನೆ ಮಾಡಲು ಸಭೆಗೆ ಪ್ರಸ್ತಾಪಿಸಿದರು. ಸಭೆಯು ಮಾನ್ಯ ಕುಲಪತಿಗಳು ನೀಡಿರುವ ವಿಷಯ ತಜ್ಞರ ಪಟ್ಟಿಯನ್ನು ಪರಿಶೀಲಿಸಿ, ಈ ಪಟ್ಟಿಯು ಮುಂಬರುವ ಆಯ್ಕೆ ಸಮಿತಿ ಪಟ್ಟಿಯಾಗಿದ್ದು, ಅತ್ಯಂತ ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಿ, ಈ ಪಟ್ಟಿಯಲ್ಲಿರುವ ವಿಷಯ ತಜ್ಞರ ಹೆಸರುಗಳನ್ನು ಅನುಮೋದಿಸಿತು. |
| 3. | ಪ್ರೊ.ಪಾರ್ವತಿ ಸಿ.ಎಸ್. ಡೀನರು, ವಿಜ್ಞಾನ ನಿಕಾಯ ಇವರು ದಿನಾಂಕ 15.07.2024 ರಿಂದ 20.08.2024 ರವರೆಗೆ ವೈಯಕ್ತಿಕವಾಗಿ 37 ದಿನಗಳ ಗಳಿಕೆ ರಜೆ ಮೇಲೆ ವಿದೇಶಕ್ಕೆ ಸ್ಯಾನಪ್ರಾನಿಸ್ಕೊ (ಅಮೇರಿಕಾ) ಗೆ ತೆರಳುವ ಕುರಿತು ಚರ್ಚೆ. | ಪ್ರೊ.ಪಾರ್ವತಿ ಸಿ.ಎಸ್. ಡೀನರು ವಿಜ್ಞಾನ ನಿಕಾಯ ಇವರು ದಿನಾಂಕ 15.07.2024 ರಿಂದ 20.08.2024 ರವರೆಗೆ ವೈಯಕ್ತಿಕವಾಗಿ 37 ದಿನಗಳ ಗಳಿಕೆ ರಜೆ ಮೇಲೆ ಸ್ಯಾನಪ್ರಾನಿಸ್ಕೊ (ಅಮೇರಿಕಾ) ವಿದೇಶಕ್ಕೆ ತೆರಳಲು ಸಭೆಯಲ್ಲಿ ಚರ್ಚಿಸಿ, ಅನುಮೋದಿಸಿ, ಅವರ ಅರ್ಜಿಯನ್ನು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು. |

| | | |
|---|---|---|
| 4. | ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ಸ ಮತ್ತು ಉಪಕರಣಾತ್ಮಕ ತಂತ್ರಜ್ಞಾನ ವಿಭಾಗಕ್ಕೆ ಮಾಡ್ಯುಲರ್ ಲ್ಯಾಬ್ ಮಾಡುವ ಕುರಿತು. | ರಾಯಚೂರು ಪಿಜಿ ಸೆಂಟರ್ ಸ್ಥಾಪನೆಗೊಂಡ ದಿನದಿಂದ 2 ನೇ ವಿಭಾಗವಾಗಿ 1993 ರಲ್ಲಿ ಉಪಕರಣಾತ್ಮಕ ತಂತ್ರಜ್ಞಾನ ವಿಭಾಗವು ಪ್ರಾರಂಭವಾಗಿದ್ದು, ಪ್ರಯೋಗಾಲಯವು ಅತ್ಯಂತ ಹಳೆಯದಾಗಿದ್ದು ಹಾಗೂ ಪ್ರಯೋಗಾಲಯ ಉಪಯೋಗಿಸಲು ಕಷ್ಟಸಾಧ್ಯವಾಗಿದ್ದು ಅದಕ್ಕಾಗಿ ಅದನ್ನು ತುರ್ತಾಗಿ ಬೇರೆ ಎಲ್ಲಾ ವಿಜ್ಞಾನ ವಿಭಾಗಗಳಲ್ಲಿ ನಿರ್ಮಿಸಿರುವ ಮಾಡ್ಯುಲರ್ ಲ್ಯಾಬ್ ಮಾದರಿಯಲ್ಲಿಯೇ ನವೀಕರಿಸಬೇಕೆಂದು ವಿಭಾಗದ ಮುಖ್ಯಸ್ಥರು ಹಾಗೂ ಡೀನರು ಮನವಿ ಮಾಡಿದ್ದಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಉಪಕರಣಾತ್ಮಕ ತಂತ್ರಜ್ಞಾನ ವಿಭಾಗಕ್ಕೆ ಮಾಡ್ಯುಲರ್ ಲ್ಯಾಬ್ ನಿರ್ಮಿಸಲು ಕೆಟಿಪಿಪಿ ನಿಯಮನುಸಾರ ಟೆಂಡರ್ ಕರೆಯಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸಭೆಯು ಈ ಬಗ್ಗೆ ಕುಲಂಕೂಷವಾಗಿ ಚರ್ಚಿಸಿ, ಉಪಕರಣಾತ್ಮಕ ತಂತ್ರಜ್ಞಾನ ವಿಭಾಗಕ್ಕೆ ಮಾಡ್ಯುಲರ್ ಲ್ಯಾಬ್ ನಿರ್ಮಿಸಲು ಕೆಟಿಪಿಪಿ ನಿಯಮನುಸಾರ ಟೆಂಡರ್ ಕರೆಯಲು ಸಭೆಯು ಅನುಮೋದನೆ ನೀಡಿತು. |
| 5. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗಕ್ಕೆ ವಿಭಾಗದ ಪ್ರಯೋಗಾಲಯ ಕುರಿತು ಚರ್ಚೆ. | ಗುಲ್ಬರ್ಗಾ ವಿಶ್ವವಿದ್ಯಾಲಯದ ರಾಯಚೂರು ಸ್ನಾತಕೋತ್ತರ ಕೇಂದ್ರದ ಪಿಜಿ ಸೆಂಟರ್‌ನಲ್ಲಿ 2018-19ನೇ ಸಾಲಿನಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಪ್ರಾರಂಭವಾಗಿದ್ದು, ಈ ವಿಭಾಗವನ್ನು ಪ್ರಸ್ತುತ ರಾಯಚೂರು ವಿಶ್ವವಿದ್ಯಾಲಯದಲ್ಲಿ ಮುಂದುವರೆಸಲಾಗಿರುತ್ತದೆ. ಸಂಬಂಧಿಸಿದ್ದು, ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಕ್ಕೆ ಸಂಬಂಧಪಟ್ಟ ಪತ್ರಿಕೆ (ಮುದ್ರಣ ಮಾಧ್ಯಮ), ರೇಡಿಯೋ, ದೂರದರ್ಶನ ಮಾಧ್ಯಮಗಳಲ್ಲಿ ಅಧ್ಯಯನ ಮಾಡುತ್ತಾರೆ. ವಿದ್ಯಾರ್ಥಿಗಳ ಹೆಚ್ಚಿನ ಅಧ್ಯಯನಕ್ಕೆ ಪೂರಕವಾಗಿ ಎಫ್.ಎಂ. ಸಮುದಾಯ ರೇಡಿಯೋ ಕೇಂದ್ರ, ಆಡಿಯೋ, ವಿಡಿಯೋ ಸೆಟಪ್ ಮತ್ತು ಸ್ಟುಡಿಯೋ ಅವಶ್ಯಕತೆ ಇದೆ ಎಂದು ವಿಭಾಗದ ಉಪನ್ಯಾಸಕರು ಮತ್ತು ಮುಖ್ಯಸ್ಥರು ಮನವಿ ಮಾಡಿದ್ದಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಲ್ಯಾಬ್ ನಿರ್ಮಿಸಲು ಕೆಟಿಪಿಪಿ ನಿಯಮನುಸಾರ ಟೆಂಡರ್ ಕರೆಯಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸಭೆಯು ಈ ಬಗ್ಗೆ ಕುಲಂಕೂಷವಾಗಿ ಚರ್ಚಿಸಿ, ಕೆಟಿಪಿಪಿ ನಿಯಮನುಸಾರ ಟೆಂಡರ್ ಕರೆಯಲು ಅನುಮೋದನೆ ನೀಡಲಾಯಿತು. |
| 6. | ವಿಶ್ವವಿದ್ಯಾಲಯದ ಗ್ರಂಥಾಲಯದ ಕಟ್ಟಡದ ಮೇಲೆ Truss Construction ನಿರ್ಮಾಣ ಮಾಡುವ ಕುರಿತು ಚರ್ಚೆ. | ವಿಶ್ವವಿದ್ಯಾಲಯದ ಗ್ರಂಥಾಲಯದ ಕಟ್ಟಡವನ್ನು 2011 ರಲ್ಲಿ ನಿರ್ಮಿಸಲಾಗಿದ್ದು ಹಾಗೂ ಈಗ ಮೊದಲನೇ ಮಹಡಿಯಲ್ಲಿ ಮಳೆ ಬಂದಾಗ ನೀರು ಜಿನುಗುತ್ತಿದ್ದು ಮತ್ತು ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣವಾಗಿದ್ದು, ಅವರಿಗೆ ಗ್ರಂಥಾಲಯದಲ್ಲಿ ಓದಲು ಸ್ಥಳಾವಕಾಶ ಮಾಡಿಕೊಡಲು ವಿದ್ಯಾರ್ಥಿಗಳಿಂದ ಹಾಗೂ ಉಪನ್ಯಾಸಕರಿಂದ ಅನೇಕ ಮನವಿಗಳನ್ನು ಸ್ವೀಕರಿಸಲಾಗಿರುತ್ತದೆ ಎಂದು ಗ್ರಂಥಪಾಲಕರು ಮನವಿ ಮಾಡಿರುತ್ತಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಗ್ರಂಥಾಲಯದ 2ನೇ ಮಹಡಿಯಲ್ಲಿ Truss ನಿರ್ಮಾಣ ಹಾಗೂ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ಬಾಗಿಲು, ಕಿಟಕಿ ಹಾಗೂ ಇನ್ನಿತರ ರಿಪೇರಿಗಳನ್ನು ಮಾಡಲು ನಿಯಮನುಸಾರ ಕ್ರಮಕೈಗೊಳ್ಳಬಹುದಾಗಿ ಸಭೆಯಲ್ಲಿ ನಿರ್ಧರಿಸಿ, ಅನುಮೋದಿಸಲಾಯಿತು. |
| 7. | ರಾಯಚೂರು ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ತಮ್ಮ ಪದವಿ ಪ್ರಮಾನ ಪತ್ರವನ್ನು ಘಟಿಕೋತ್ಸವದಲ್ಲಿ | ಕುಲಸಚಿವರು ಮೌಲ್ಯಮಾಪನ ಇವರು, ವಿಶ್ವದ್ಯಾಲಯದ ಪ್ರಥಮ ಘಟಿಕೋತ್ಸವದ ತಯಾರಿ ನಡೆಸುತ್ತಿದ್ದು, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಪದವಿ ಪ್ರಮಾಣ ಪತ್ರವನ್ನು ಘಟಿಕೋತ್ಸವದಲ್ಲಿ |

| | | |
|---|---|---|
| | ಪಡೆಯಲು ಅಂತಿಮ ಸೆಮಿಸ್ಟರ್‌ನಲ್ಲಿಯೇ ಘಟಿಕೋತ್ಸವದ ಶುಲ್ಕವನ್ನು ನಿಗದಿ ಮಾಡುವ ಕುರಿತು. | ನೀಡುವ ಬಗ್ಗೆ ಚರ್ಚಿಸಿ, ಘಟಿಕೋತ್ಸವ ಪ್ರಮಾಣ ಪತ್ರದ ಶುಲ್ಕವನ್ನು 2000 ರೂಗಳನ್ನು ನಿಗದಿಪಡಿಸಬೇಕೆಂದು ತಿಳಿಸಿದರು. ಬೇರೆ ಬೇರೆ ವಿಶ್ವವಿದ್ಯಾಲಯದ ಘಟಿಕೋತ್ಸವ ಶುಲ್ಕವನ್ನು ಪರಿಗಣಿಸಿ ರಾಯಚೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಪ್ರಮಾಣ ಪತ್ರಕ್ಕೆ 2000 ರೂಗಳನ್ನು ನಿಗದಿಪಡಿಸಿದರು.<br><br>ಮುಂದುವರೆದು, ವಿಶ್ವವಿದ್ಯಾಲಯವು ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕದ ಅಧಿಸೂಚನೆ ಹೊರಡಿಸಿದ ನಂತರ, ಘಟಿಕೋತ್ಸವ ಶುಲ್ಕವನ್ನು ಕೆಲ ವಿದ್ಯಾರ್ಥಿಗಳು ಕಟ್ಟದೇ ಇದ್ದಲ್ಲಿ, ಆ ವರ್ಷದಲ್ಲಿ ಪ್ರಮಾಣ ಪತ್ರವನ್ನು ಪಡೆಯಲು ವಂಚಿತರಾಗುತ್ತಾರೆ. ತದನಂತರ ನಡೆಯುವ ಘಟಿಕೋತ್ಸವದಲ್ಲಿ ಹಿಂದಿನ ವರ್ಷದ ಪ್ರಮಾಣ ಪತ್ರವನ್ನು ಪಡೆಯಬೇಕಾದಲ್ಲಿ ವಿದ್ಯಾರ್ಥಿಗಳು ದಂಡ ಶುಲ್ಕವನ್ನು ನೀಡಬೇಕಾಗುತ್ತದೆ. ಈ ದಂಡ ಶುಲ್ಕವು ಪ್ರತಿ ವರ್ಷ ಹೆಚ್ಚಾಗುತ್ತಾ ಹೋಗುತ್ತದೆ. ಆದ್ದರಿಂದ ಈ ದಂಡ ಶುಲ್ಕವನ್ನು ತಪ್ಪಿಸಲು ಪ್ರತಿ ವರ್ಷ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ಜೊತೆಗೆ ಘಟಿಕೋತ್ಸವ ಪ್ರಮಾಣ ಪತ್ರದ 2000 ರೂಗಳ ಶುಲ್ಕವನ್ನು ಸೇರಿಸಿ ಭರಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಕುಲಸಚಿವರು ಮೌಲ್ಯಮಾಪನ ಇವರು ನೀಡಿರುವ ಪ್ರಸ್ತಾವನೆಯನ್ನು ಅಂಗೀಕರಿಸಿ, ಘಟಿಕೋತ್ಸವದ 2000 ರೂಗಳ ಶುಲ್ಕವನ್ನು ಅಂತಿಮ ವರ್ಷದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದ ಜೊತೆಗೆ ಭರಿಸಲು ನಿಗದಿಗೊಳಿಸಬೇಕೆಂದು ತೀರ್ಮಾನಿಸಿ, ಅನುಮೋದಿಸಿತು. |
| 8. | ರಾಯಚೂರು ವಿಶ್ವದ್ಯಾಲಯ ಮತ್ತು ವೇಲ್ಸ್ ಕರ್ನಾಟಕ Partnership Project ಬಗ್ಗೆ ಚರ್ಚೆ. | ವೇಲ್ಸ್ ಕರ್ನಾಟಕ Partnership Project ಅಡಿಯಲ್ಲಿ ವೇಲ್ಸ್ ಮೇಟ್ರೋಪಾಲಿಟನ್ ಯುನಿರ್ವಸಿಟಿಗೆ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಹಾಗೂ ಬೋದಕ ಸಿಬ್ಬಂದಿಗಳನ್ನು Exchange Program ನಡೆಸಲು ವಿಶ್ವವಿದ್ಯಾಲಯವು 4 ಲಕ್ಷರೂಗಳನ್ನು ಮೀಸಲಿಡಬೇಕಾಗುತ್ತದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.<br>ಈ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ರಾಯಚೂರು ವಿಶ್ವವಿದ್ಯಾಲಯ, ವೇಲ್ಸ್ ಕರ್ನಾಟಕ Partnership Project ಅತ್ಯಂತ ಲಾಭದಾಯಕವಾಗಿದ್ದು, ತಾಂತ್ರಿಕತೆ ಹಾಗೂ ಶೈಕ್ಷಣಿಕ ಅಧ್ಯಯನಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಸಮೃದ್ಧಗೊಳಿಸಲು ಹಾಗೂ ಎತ್ತರಕ್ಕೆ ಕೊಂಡ್ಯೊಯಲು ಅನುಕೂಲವಾಗುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿ, 4 ಲಕ್ಷರೂಗಳನ್ನು ಮೀಸಲಿಡಲು ಒಪ್ಪಿಗೆ ಸೂಚಿಸಲಾಯಿತು.<br>ಮುಂದುವರೆದು, ಈ Exchange Program ನಡೆಸಲು ಒಂದು ಮಾದರಿ ಕ್ರಮ ನಿಯಮಾವಳಿ ರಚಿಸಬೇಕೆಂದು ಕುಲಪತಿಗಳಿಗೆ ತಿಳಿಸಿ, ಅನುಮೋದಿಸಲಾಯಿತು. |
| 9. | ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಮತ್ತು ಬ್ರಿಟಿಷ್ ಕೌನ್ಸಿಲ್ ಹಾಗೂ ರಾಯಚೂರು ವಿಶ್ವವಿದ್ಯಾಲಯದ ಆಯ್ಕೆ ಬಗ್ಗೆ ಚರ್ಚೆ. | ಮಾನ್ಯ ಕುಲಪತಿಗಳು ಸಭೆಗೆ, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಮತ್ತು ಬ್ರಿಟಿಷ್ ಕೌನ್ಸಿಲ್ ಒಡಗೂಡಿ, ಕರ್ನಾಟಕ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಶ್ರೇಷ್ಠತೆಯನ್ನು ಪ್ರಚಾರ ಮಾಡುವ ಹಿನ್ನಲೆಯಲ್ಲಿ ಸ್ಕೌಟ್ (Scholarship for out Standing Under graduate talent) ಕಾರ್ಯಕ್ರಮದ ಅಡಿಯಲ್ಲಿ ರಾಯಚೂರು ವಿಶ್ವವಿದ್ಯಾಲಯದಿಂದ ಆಯ್ಕೆಯಾಗಿರುವುದನ್ನು ಶ್ಲಾಘೀಸುತ್ತಾ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ 5 ವಿದ್ಯಾರ್ಥಿಗಳಿಗೆ ಯುನೈಟೆಡ್ ಕಿಂಗ್‌ಡಮ್‌ಗೆ ಸುಮಾರು 2 ರಿಂದ 4 ವಾರಗಳ ಕಾಲ ಅಧ್ಯಯನ ನಡೆಸಲು ಸುಮಾರು 6 ಲಕ್ಷರೂಗಳನ್ನು ವಿಶ್ವವಿದ್ಯಾಲಯವು ಮೀಸಲಿಡಲು ತೀರ್ಮಾನಿಸಲಾಯಿತು. |

| | | |
|---|---|---|
| | | ಮುಂದುವರೆದು, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಕರ್ನಾಟಕ ಸರ್ಕಾರ ನೀಡಿರುವ ಮಾರ್ಗಸೂಚಿ ಹಾಗೂ ಮೀಸಲಾತಿಯನ್ನು ಅನುಸರಿಸಿ, ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 10. | ಮಾನ್ಯ ಕುಲಪತಿಗಳ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಕುರಿತು ಚರ್ಚೆ. | ಮಾನ್ಯ ಕುಲಪತಿಗಳು ವೈದ್ಯಕೀಯ ವೆಚ್ಚವನ್ನು ಸರ್ಕಾರದ ನಿಯಮನುಸಾರ ಜಿಲ್ಲಾ ಆರೋಗ್ಯ ಅಧಿಕಾರಿ ಅವರು ನೀಡಿರುವ ವರದಿ ಪ್ರಕಾರ ಅನುಮೋದಿಸಲಾಗಿದ್ದು, ಮಾನ್ಯ ಕುಲಪತಿಗಳು ವೈದ್ಯಕೀಯ ವೆಚ್ಚದ ರೂಗಳನ್ನು 2,05,581=00 ಪಾವತಿಸಲು ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು. |

(ಪ್ರೊ.ವಿಶ್ವನಾಥ ಎಂ.) 12/7/24
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

(ಪ್ರೊ.ಹರೀಶ್ ರಾಮಸ್ವಾಮಿ) 12.7.2024
ಕುಲಪತಿಗಳು ಹಾಗೂ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.